ಸಿ.ಸಿ.ನಂ. 69/2021

ಸಿ.ಡಬ್ಲ್ಯು 1

ಪಿ.ಡಬ್ಲ್ಯು 1

## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಮಟಾ

**ಸಿ.ಸಿ.ನಂ. 69/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ರೇಷ್ಮಾ |
| ಗಂಡನ ಹೆಸರು | : | ರತ್ನಾಕರ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ಮನೆವಾರ್ತೆ |
| ವಾಸ್ತವ್ಯ | : | ಕುಮಟಾ |

(ಇಂದು ದಿನಾಂಕಃ 27-07-**2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿಃ 19-09-2019 ರಂದು ನಾನು ಕುಮಟಾದ ಟಿ.ಎನ್. ಹೆಗಡೆ ಆಸ್ಪತ್ರೆಯಿಂದ ದಾಸ ಕಾಂಪ್ಲೆಕ್ಸ ನ ಹತ್ತಿರ ಬರುತ್ತಿರುವಾಗ ನಾನು ಸದರಿ ಸಂದರ್ಭದಲ್ಲಿ ನಾನು ನನ್ನ ಮಾವನ ಮನೆಗೆ ಹೋಗುತ್ತಿದ್ದು ಆಗ ಹಿಂದುಗಡೆಯಿಂದ ಒಬ್ಬ ವ್ಯಕ್ತಿಯು ಹೆಲ್ಮೆಟ ಹಾಕಿಕೊಂಡು ಬೈಕನಲ್ಲಿ ಬಂದಿದ್ದು ನನ್ನ ಮಂಗಳಸೂತ್ರವನ್ನು ಕುತ್ತಿಗೆಯಿಂದ ಕಸಿದು ಕೊಂಡು ಹೋಗಿರುತ್ತಾನೆ. ಆಗ ಸಮಯ 06.30 ಗಂಟೆಯಾಗಿರುತ್ತದೆ. ನಾನು ಧರಿಸಿಕೊಂಡಿದ್ದ ಮಂಗಳಸೂತ್ರವು 20 ಗ್ರಾಂ ಇತ್ತು. ನಂತರ ನಾನು

**ಸಿ.ಸಿ.ನಂ.** 69/2021

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ಆರೋಪಿತನು ನನ್ನ ಮಂಗಳಸೂತ್ರ ಕಸಿಕೊಂಡು ಹೋದ ಬಗ್ಗೆ ಪೊಲೀಸರಿಗೆ ತಿಳಿಸಿರುತ್ತೇನೆ. ಈ ಕುರಿತಾಗಿ ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದೂರಾಗಿದ್ದು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ನಂತರ ಮರುದಿನ ಪೊಲೀಸರು ಘಟನಾ ಸ್ಥಳಕ್ಕೆ ಕರೆದಿದ್ದು ಅಲ್ಲಿ ಸದರಿ ಸಂದರ್ಭದಲ್ಲಿ ಪಂಚನಾಮೆಯನ್ನು ಮಾಡಿದ್ದು ಸದರಿ ಸಂರ್ಭದಲ್ಲಿ ಭಾವಚಿತ್ರವನ್ನು ತೆಗೆದಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಪಂಚನಾಮೆಯಾಗಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಭವಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದುಅದನ್ನು ನಿಪಿ.3 ಹಾಗು 4 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ಕಚ್ಚಾ ನಕಾಶೆಯಾಗಿದ್ದು ಅದನ್ನು ನಿಪಿ.5 ಎಂದು, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

**ಸಿ.ಸಿ.ನಂ.** 69/2021

**ಸಿ.ಡಬ್ಲ್ಯು 1**

**ಪಿ.ಡಬ್ಲ್ಯು 1**

ಸುಮಾರು ದಿನಗಳ ಪೊಲೀಸರು ನನ್ನನ್ನು ಪೊಲೀಸರ ಠಾಣೆಗೆ ಕರೆದಿದ್ದು ಆರೋಪಿತನನ್ನು ಹಿಡಿದಿರುತ್ತೇವೆ ಎಂದು ಹೇಳಿರುತ್ತಾರೆ. ನಾನು ಪೊಲೀಸ ಠಾಣೆಗೆ ಹೋಗಿ ಆರೋಪಿಯನ್ನು ಗುರುತಿಸಿರುತ್ತೇನೆ. ಆರೋಪಿ ನ್ಯಾಯಾಲಯದ ಮುಂದೆ ಗೈರು ಹಾಜರಿದ್ದು ಆರೊಪಿ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದು ಗುರುತಿಸುವಿಕೆಗೆ ತಕರಾರು ಇದೆ ಎಂದು ತಿಳಿಸಿದ ಕಾರಣದಿಂದಾಗಿ ವಿನಾಯತಿ ಅರ್ಜಿಯನ್ನು ತಿರಸ್ಕರಿಸಲಾಯಿತು.

**(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

sd/-

ಪ್ರ.ದ.ನ್ಯಾ.ದಂ. ಕುಮಟಾ